

ಮದ್ದೂರು, ಮಳವಳ್ಳಿ, ಲಿಂಗಸುಗೂರು, ಮಾನ್ವಿ – ಹೀಗೆ ಮಳೆ ಮುನಿಸಿಕೊಂಡ ಪರಿಣಾಮವಾಗಿ ನೀರಿಗೆ ತತ್ವಾರ ಎದುರಾದ ತಾಲ್ಲೂಕುಗಳ ಪಟ್ಟಿ ಬೆಳೆಯುತ್ತಲೇ ಇದೆ. ಬಾರದ ಮಳೆಯನ್ನು ಒಲಿಸಿಕೊಂಡು ಕರೆಯುವ ನಿಟ್ಟಿನಲ್ಲಿ ರಾಜ್ಯದ ಜನರು, ರೈತರು ತಮಗೆ ತೋಚಿದ ದಾರಿಗಳನ್ನು ಅನುಸರಿಸುತ್ತಿದ್ದಾರೆ. ಕಷ್ಟಬಂದಾಗ ಭಕ್ತಿಯ ಮಾರ್ಗವಲ್ಲದೆ ಮತ್ತೇನು ಹೊಳೆದೀತು? ರಾಜ್ಯದ 12 ಸಾವಿರ ಮಸೀದಿಗಳಲ್ಲಿ ಮಳೆಗಾಗಿ ವಿಶೇಷ ಪ್ರವಚನ ಆಯೋಜಿಸಲಾಗಿದೆ. ಚರ್ಚ್‌ಗಳಲ್ಲಿ, ದೇವಸ್ಥಾನಗಳಲ್ಲಿ ಪ್ರಾರ್ಥನೆಗಳನ್ನು ಸಲ್ಲಿಸಲಾಗುತ್ತಿದೆ.

ಗಣಿಗಾರಿಕೆಯಿಂದ ತತ್ತರಿಸಿಹೋಗಿರುವ ಹೊಸಪೇಟೆ, ಸಂಡೂರು ಭಾಗಗಳಲ್ಲಿ ಕೃಷಿ

**ರೈತನ ಒಡಲಾಳ**

## ಹಿಂಗಾರಿನ ನಿರೀಕ್ಷೆಯಷ್ಟೇ ಉಳಿದ ದಾರಿ



21 ಎಕರೆ ಜಮೀನಿನಲ್ಲಿ ಒಂದೆಡೆ ಮಳೆಯನ್ನೂ ಮತ್ತೊಂದಡೆ ಆಲಮಟ್ಟಿ ಜಲಾಶಯವನ್ನೂ ಅವಲಂಬಿಸಿ ಕೃಷಿ ಮಾಡುತ್ತಿದ್ದೇನೆ. ಒಂದು ವರ್ಷ ಮಳೆಯಾಗಿಲ್ಲ ಎಂದರೆ ಆಗುವ ನಷ್ಟವನ್ನು ಭರ್ತಿ ಮಾಡಲು ದೀರ್ಘಕಾಲ ಬೇಕು. ಬಿಜಾಪುರ ಜಿಲ್ಲೆ ಸದಾ ಬರಗಾಲ ಪೀಡಿತ ಜಿಲ್ಲೆಯೆಂಬ ಹಣೆಪಟ್ಟಿ ಕಟ್ಟಿಕೊಂಡಿದೆಯಲ್ಲ. ಮುಂಗಾರು ಮಳೆಯನ್ನು ನಂಬಿ ನಾನು ಶೇಂಗಾ, ಹೆಸರು, ಉದ್ದು, ತೊಗರಿ, ಸಜ್ಜೆ ಬಿತ್ತನೆ ಮಾಡಿಯಾಗಿದೆ. ಆದರೆ ಎಷ್ಟು ಇಳುವರಿಯು ಕೈಗೆ ದಕ್ಕುತ್ತದೆ ಎಂಬುದನ್ನು ಕಾದು ನೋಡಬೇಕು. ಮಳೆ ಬಾರದೇ ಇರುವುದರಿಂದ ಬಿತ್ತಿದ ತೊಗರಿ, ಕಬ್ಬು ಮತ್ತು ಈರುಳ್ಳಿ ಬೆಳೆಗಳು ಈಗಾಗಲೇ ನಾಶವಾಗಲಾರಂಭಿಸಿವೆ. ಇನ್ನು ಹಿಂಗಾರು ಮಳೆಯನ್ನು ಆಧರಿಸಿ ಏನಾದರೂ ಬಿತ್ತನೆ ಮಾಡಬಹುದೇ ಎಂದು ಕಾಯುವುದಷ್ಟೇ ನಮಗೆ ಉಳಿದಿರುವ ದಾರಿ. ಈ ನಡುವೆ ದ್ರಾಕ್ಷಿ ಬೆಳೆಗೆ ಬೆಂಬಲ ಬೆಲೆ ಘೋಷಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸುವುದಕ್ಕೆ ಸಭೆ ಕರೆದಿದ್ದೇವೆ.

**-ಅರವಿಂದ ಕುಲಕರ್ಣಿ ಇಂಗಳೇಶ್ವರ,**
ಬಸವನ ಬಾಗೇವಾಡಿ